# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿ, ಹೊರಮಾವು ಉಪ ವಲಯ,**
**ಮಹದೇವಪುರ ವಲಯ ಬೆಂಗಳೂರು-43.**

ಸಂಖ್ಯೆ.ಬಿಬಿಎಂಪಿ/ಸಕಂಅಹೊಉವ/(ಸಿಬ್ಬಂದಿ)ಪಿಆರ್/ /2022-23 ದಿನಾಂಕ:- 07.01.2023

***ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:-07.01.2023 ರಂದು ಹೊರಮಾವು ಉಪ-ವಿಭಾಗದ ಕಛೇರಿಯಲ್ಲಿ ಹೊರಮಾವು ವಾರ್ಡ್-81 ಮತ್ತು ಬಾಬುಸಾಪಾಳ್ಯ ವಾರ್ಡ್-82 ರ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.***

**ಉಪಸ್ಥಿತರು:**

| ಕ್ರ.ಸಂ | ಹೆಸರು | ಹುದ್ದೆ | ಮೊ.ನಂ |
|---|---|---|---|
| 1 | ಶ್ರೀ.ವಿನಯ್.ಕೆ | ಸಹಾಐಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ | 99739207348 |
| 2 | ಶ್ರೀ.ಎಸ್.ಹೆಚ್.ಕೇಶವ | ನೋಡಲ್ ಅಧಿಕಾರಿ ವಾರ್ಡ್ ನಂ-81 | 9448731722 |
| 4 | ಶ್ರೀ. ರಮೇಶ್ | ಸಹಾಯಕ ಅಭಿಯಂತರರು ವಾರ್ಡ್ ಸಂಚಾಲಕರು | 9480688025 |
| 5 | ಶ್ರೀ.ವಿದ್ಯಾ.ಎಂ | ಕಿರಿಯ ಆರೋಗ್ಯ ನಿರೀಕ್ಷಕರು | |
| 6 | ಶ್ರೀ.ಹರೀಶ್ ಕುಮಾರ್ ಕೆ.ವಿ | ಕಿರಿಯ ಆರೋಗ್ಯ ನಿರೀಕ್ಷಕರು | |
| 7 | ಶ್ರೀ.ರಾಮಯ್ಯ | ಬಾಣಸವಾಡಿ ಟ್ರಾಫಿಕ್ ಸಿಬ್ಬಂಧಿ | |
| 8 | ಶ್ರೀ.ಮೋಹನ ರಂಗ | ಬೆಸ್ಕಾಂ, ಇ-8 ಉಪ ವಿಭಾಗ | |
| 9 | ಶ್ರೀ.ಬಾಲಕೃಷ್ಣ ನಾಯಕ್.ಕೆ.ಎಸ್ | ಮಾರ್ಷಲ್ | |
| 10 | ಶ್ರೀ.ಕೃಷ್ಣಪ್ಪ.ಎಂ | ಮಾರ್ಷಲ್ | |
| 11 | ಶ್ರೀ.ಮೋಹನ್ | ಬೀದಿ ದೀಪಗಳ ನಿರ್ವಹಣೆ ಸಿಬ್ಬಂಧಿ | |
| | | ಸಾರ್ವಜನಿಕರು | |
| 1 | ಶ್ರೀ.ಮುರಳಿ.ಕೆ | ಹೊರಮಾವು | |
| 2 | ಶ್ರೀ.ಆದರ್ಶ್.ಪಿ, ಪ್ರವೀಣ್.ಎ, ಮುರಳಿ.ಕೆ | ಬೃಂದಾವನ ಬಡಾವಣೆ ಹೊರಮಾವು | |
| 3 | ಶ್ರೀ.ಮಹೇಶ್ | ಬಾಬುಸಾಪಾಳ್ಯ | |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.81 ಮತ್ತು 82 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

ಮು.ತಿ.ನೋ

**ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-**

**ಶ್ರೀ.ಮುರಳಿ, ಹೊರಮಾವು ಹೊರಮಾವು ವಾರ್ಡ್ ನಂ.81 :-** ರವರು ಮಾತನಾಡುತ್ತಾ, ಹೊರಮಾವು ಗ್ರಾಮದ ಸರ್.ಎಂ.ವಿ ನಗರ ಮುಖ್ಯರಸ್ತೆಯಲ್ಲಿ ತಾತ್ಕಾಲಿಕ ಶೆಡ್‌ನ್ನು ರಸ್ತೆಗೆ ಒತ್ತುವರಿ ಮಾಡಿಕೊಂಡಿದ್ದು, ಇದನ್ನು ಸಾರ್ವಜನಿಕರ ಹಿತದೃಷ್ಠಿಯಿಂದ ಕೂಡಲೇ ತೆರವುಮಾಡಿಕೊಡಬೇಕೆಂದು ಹಾಗೂ ಇಲ್ಲಿ ಮೂರು ವಿದ್ಯುತ್ ಕಂಬಗಳು ರಸ್ತೆಗೆ ಅಡ್ಡಲಾಗಿದ್ದು, ಇವುಗಳನ್ನು ಸ್ಥಳಾಂತರಿಸಲು ಕೋರಿಕೊಂಡಿರುತ್ತಾರೆ.

**ಕ್ರಮ:-** ಸಹಾಯಕ ಅಭಿಯಂತರರು, ಹೊರಮಾವು ವಾರ್ಡ್ ನಂ.81 ಹಾಗೂ ಸಹಾಯಕ ಅಭಿಯಂತರರು, ಬೆಸ್ಕಾಂ ಬಾಣಸವಾಡಿ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ.ಆದರ್ಶ್.ಪಿ, ಪ್ರವೀಣ್.ಎ, ಮುರಳಿ.ಕೆ ಬೃಂದಾವನ ಬಡಾವಣೆ ಹೊರಮಾವು ವಾರ್ಡ್ ನಂ.81:-** ರವರು ಮಾತನಾಡುತ್ತಾ, ಹೊರಮಾವು ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಸ್ಮಶಾನವಿದ್ದು, ಸದರಿ ಸ್ಮಶಾನಕ್ಕೆ ಶವಗಳನ್ನು ಮೂಲ ದಾರಿಯಲ್ಲಿ ಸಾಗಿಸುವ ಬದಲು ಬೃಂದಾವನ ಬಡಾವಣೆ ಮುಖಾಂತರ ಸಾಗಿಸುತ್ತಿದ್ದು, ಈ ಶವಗಳನ್ನು ತರುವಾಗ ಬಡಾವಣೆಯ ದಾರಿಯಲ್ಲಿ ಶವ ಕಾರ್ಯವನ್ನು ಮಾಡುತ್ತಿದ್ದು, ಇದರಿಂದ ನಮಗೆ ವಾಸ ಮಾಡಲು ತೊಂದರೆಯಾಗಿರುವುದಾಗಿ ಇಲ್ಲದಿದ್ದಲ್ಲಿ ಪಿಳ್ಳಪ್ಪ ಬಡಾವಣೆ ಕಡೆ ಮತ್ತು ಬೃಂದಾವನ ಬಡಾವಣೆ ಕಡೆ 2 ಕಡೆ ಕಾಂಪೌಂಡ್ ತೆರವುಮಾಡಿ ಶವಗಳನ್ನು ಸಾಗಿಸಲು ಅನುವು ಮಾಡಲು, ಇಲ್ಲದಿದ್ದಲ್ಲಿ ಬೃಂದಾವನ ಬಡಾವಣೆ ಕಡೆ ಕಾಂಪೌಂಡ್‌ನ್ನು ಮುಚ್ಚುವುದಾಗಿ ಕೂಡಲೇ ಮೂಲ ರಸ್ತೆಯನ್ನು ಸರ್ವೆ ಮಾಡಿಸಿ, ಮೂಲ ರಸ್ತೆಯಲ್ಲಿ ಶವಗಳನ್ನು ಸಾಗಿಸಲು ಅನುವು ಮಾಡಿಕೊಡಲು ಕೋರಿಕೊಂಡಿರುತ್ತಾರೆ.

**ಕ್ರಮ:-** ಸಹಾಯಕ ಅಭಿಯಂತರರು, ಹೊರಮಾವು ವಾರ್ಡ್ ನಂ.81 ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ.ಮಹೇಶ್, ಬಾಬುಸಾಪಾಳ್ಯ, ಶ್ರೀ.ಮನೋಜ್.ಎಂ.ಎನ್ ಮಲ್ಲಪ್ಪ ಬಡಾವಣೆ ವಾರ್ಡ್ ನಂ.82:-** ರವರು ಮಾತನಾಡುತ್ತಾ, ನಂಜಪ್ಪ ಗಾರ್ಡನ್ 6ನೇ ಅಡ್ಡರಸ್ತೆಯಲ್ಲಿ ಸುಮಾರು 15 ದಿನಗಳಿಂದ ಕೊಳವೆಬಾವಿಯ ಮೋಟರ್‌ಪಂಪ್ ದುರಸ್ಥಿಯಾಗಿದ್ದು, ಇದರಿಂದ ಕುಡಿಯುವ ನೀರಿಗೆ ಇಲ್ಲಿನ ಸಾರ್ವಜನಿಕರಿಗೆ ತೊಂದರೆಯಾಗಿದ್ದು, ಕೂಡಲೇ ದುರಸ್ಥಿ ಮಾಡಿಕೊಡಬೇಕೆಂದು ಕೋರಿಕೊಂಡಿರುತ್ತಾರೆ.

**ಕ್ರಮ:-** ಸಹಾಯಕ ಅಭಿಯಂತರರು, ಹೊರಮಾವು ವಾರ್ಡ್ ನಂ.81 ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ದಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

**ಶ್ರೀ.ರಮೇಶ್**
**ಸಹಾಯಕ ಅಭಿಯಂತರರು ಹೊರಮಾವು ವಾರ್ಡ್ ಸಂಖ್ಯೆ-81**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**(ಎಸ್.ಹೆಚ್ ಕೇಶವ)**
**ನೋಡೆಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ-81**
**ಹಾಗೂ ತೋಟಗಾರಿಕಾ ನಿರೀಕ್ಷಕರು**
**(ಮಹದೇವಪುರ ವಲಯ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಪ್ರತಿಯನ್ನು:-**
**1.ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಮಂಡಿಸಲಾಗಿದೆ.**
**2.ಕಛೇರಿ ಪ್ರತಿ.**